Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ.ಸಿ ನಂಬರ 877/2023

ಸಿ ಡಬ್ಲ್ಯೂ-1
ಪಿ ಡಬ್ಲ್ಯೂ-1

| | | |
|---|---|---|
| ಸಾಕ್ಷಿದಾರರ ಹೆಸರು | ಃ- | ಲಕ್ಷ್ಮೀಬಾಯಿ |
| ಗಂಡನ ಹೆಸರು | ಃ- | ಪಾಂಡಪ್ಪ |
| ವಯಸ್ಸು | ಃ- | 60 ವರ್ಷ |
| ಉದ್ಯೋಗ | ಃ- | ಒಕ್ಕಲುತನ |
| ವಾಸಸ್ಥಳ | ಃ- | ಹಾಲಭಾವಿ ತಾಂಡ |

**ದಿ.12-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ.***

ಚಾ.ಸಾ-2 ಮತ್ತು 3 ನಮ್ಮೂರಿನವರು ಪರಿಚಯ ಇದೆ. ಚಾ.ಸಾ-4 ಮತ್ತು 5 ನನ್ನ ಮಕ್ಕಳು. ಚಾ.ಸಾ-6 ನನ್ನ ಗಂಡ. ಚಾ.ಸಾ-7 ನನ್ನ ಮೈದುನ. 1 ಮತ್ತು 2 ನೇ ಆರೋಪಿತರು ನನ್ನ ನಾದಿನಿಯ ಮಕ್ಕಳು. 3 ನೇ ಆರೋಪಿ ನನ್ನ ಅಣ್ಣ. 4 ಮತ್ತು 5 ನೇ ಆರೋಪಿತರು ನನ್ನ ನಾದಿನಿಯರು. 6 ನೇ ಆರೋಪಿ ನನ್ನ ಮೈದುನನ ಮಗ.

ಸುಮಾರು 3 ವರ್ಷಗಳ ಹಿಂದೆ ಬೆಳಿಗ್ಗೆ 9-00 ಗಂಟೆಗೆ ನಮ್ಮ ಮನೆಯ ಮುಂದೆ ನಾನು ಮತ್ತು ಚಾ.ಸಾ-4 ಮತ್ತು 5 ರವರು ಇದ್ದಾಗ ಎಲ್ಲಾ ಆರೋಪಿತರು ಬಂದು ಬರಲೇ ಸೂಳೆ ಮಕ್ಕಳೆ ಮನೆಯಲ್ಲಿ ಏಕೆ ಕುಳಿತಿದ್ದೀರಿ ಹೊರಗೆ ಬಾ ಎಂದು ಬೈದರು. ಆಗ ನಾವು ಹೊರಗೆ ಬಂದಾಗ 1 ಮತ್ತು 5 ನೇ ಆರೋಪಿತರು ನಮಗೆ ಉಗುಳಿರುತ್ತಾರೆ. ಆರೋಪಿತರು ನಮಗೆ ಹೊಲದಲ್ಲಿ ಪಾಲು ಕೇಳಿ ಬೈದಾಡಿರುತ್ತಾರೆ. ನಾವು ಪಾಲು ಕೊಡುತ್ತೇವೆ ಎಂದು ಹೇಳಿದರೂ ಸಹ 1 ಮತ್ತು 2 ನೇ ಆರೋಪಿತರು ಬಂದು ನನ್ನ ಸೀರೆ ಹಿಡಿದು ಎಳೆದಾಡಿ ಹರಿದಿರುತ್ತಾರೆ. ಕುಪ್ಪಸವನ್ನು ಸಹ ಹರಿದಿರುತ್ತಾರೆ. ನಂತರ ಚಾ..ಸಾ-4 ಮತ್ತು 5 ರವರು ಬಿಡಿಸಲು ಬಂದಾಗ 3 ನೇ ಆರೋಪಿತನು ಮುತ್ತಣ್ಣನಿಗೆ ಮೊಣಕಾಲಿಗೆ ಹೊಡೆದಿರುತ್ತಾರೆ. ಚಾ.ಸಾ-4 ರವರಿಗೆ ಶಾಂತಾಬಾಯಿ, ಶಾರದಾ ಮತ್ತು ಮಣಿ ರವರು ಕೈಗಳಿಂದ ತಲೆಗೆ ಮತ್ತು ಬುಜಕ್ಕೆ ಹೊಡೆದಿರುತ್ತಾರೆ. ನಂತರ ಚಾ.ಸಾ-6 ಮತ್ತು 7 ರವರು ಬಿಡಿಸಿರುತ್ತಾರೆ. ನಂತರ ಆರೋಪಿತರು ಅವಾಚ್ಯವಾಗಿ ಬೈದು ಕೊಲೆ ಮಾಡುತ್ತೇವೆ ಎಂದು ನಮಗೆ ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನಾವು ಆಸ್ಪತ್ರೆಗೆ ಹೋಗಿ ಚಾ.ಸಾ-4 ಮತ್ತು 5 ರವರಿಗೆ ದಾಖಲಿಸಿರುತ್ತೇವೆ. ನಂತರ ಮನೆಗೆ ಹೋಗಿ ವಿಚಾರ ಮಾಡಿ ದೂರನ್ನು ಚಾ.ಸಾ-7 ರವರ ಮೂಲಕ ಪೋಲಿಸ್ ಠಾಣೆಗೆ ಕಳುಹಿಸಿರುತ್ತೇನೆ. ದೂರಿನಲ್ಲಿರುವ ಹೆಬ್ಬೆಟ್ಟಿನ ಸಹಿ ನೋಡಿ

ಗುರುತಿಸಿದ್ದು ದೂರನ್ನು ನಿ.ಪಿ-1 ಎಂದು ಗುರುತಿಸಲಾಯಿತು. ನಂತರ ಪೋಲಿಸರು ನನ್ನನ್ನು ವಿಚಾರಣೆ ಮಾಡಿ ಮರುದಿನ ಹೇಳಿಕೆ ಪಡೆದಿರುತ್ತಾರೆ.

**<u>ಪಾಟೀ ಸವಾಲು ಶ್ರೀ ಹೆಚ್.ವೈ ವಕೀಲರಿಂದ : -</u>**

ಪೋಲಿಸ್ ಠಾಣೆಗೆ ದೂರು ಕೊಡಲು 8 ತಾಸು ತಡವಾಗಿರುತ್ತದೆ ಎಂದರೆ ಸರಿ. ಮನೆಯಲ್ಲಿ ವಿಚಾರ ಮಾಡುವದಕ್ಕೆ ತಡವಾಗಿರುತ್ತದೆ. ಚಾ..ಸಾ-7 ರವರ ಮೂಲಕ ದೂರು ಕಳುಹಿಸಿದ್ದು ಆತ ದೂರಿಗೆ ಸಹಿ ಮಾಡಿದ್ದಾನೋ ಇಲ್ಲವೋ ನನಗೆ ಗೊತ್ತಿಲ್ಲ. ದೂರಿಗೆ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಓದಲು ಮತ್ತು ಬರೆಯಲು ಬರುವದಿಲ್ಲ. ದೂರನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದೂರಿನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

2. ಜಮೀನಿನ ಪಾಲಿನ ಸಂಬಂಧ ನಮಗೂ ಮತ್ತು ಆರೋಪಿತರ ನಡುವೆ ವೈಷಮ್ಯ ಇದೆ ಎಂದರೆ ಸರಿ. ಗಣೇಶ ಮತ್ತು ಶಾರದಾ ರವರು ನನ್ನ ಸೀರೆ ಹಿಡಿದು ಎಳೆದಾಡಿರುತ್ತಾರೆ. ನನ್ನ ಸೀರೆ ಹರಿದಿರುತ್ತದೆ. ಕುಪ್ಪಸ ಹಿಡಿದು ಎಳೆದಾಗ ಹರಿದಿರುತ್ತದೆ. ಸೀರೆ ಮತ್ತು ಕುಪ್ಪಸವನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ನನಗೆ ವೆಂಕಟೇಶ ಮತ್ತು ತಿಪ್ಪಣ್ಣ ಗಾಯ ಮಾಡಿರುತ್ತಾರೆ. ಗಾಯ ಮುತ್ತಣ್ಣನಿಗೆ ಆಗಿರುತ್ತದೆ ನನಗೆ ಯಾವುದೇ ಗಾಯ ಆಗಿರುವುದಿಲ್ಲ. ನನಗೆ ಗಾಯ ಆದ ಬಗ್ಗೆ ಪೋಲಿಸರಿಗೆ ಹೇಳಿರುತ್ತೇನೆ. ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ನನಗೆ ಯಾವುದೇ ಗಾಯ ಆಗಿರಲಿಲ್ಲ ನಾನು ದವಾಖಾನೆಗೆ ಹೋಗಿ ತೋರಿಸಿಕೊಂಡಿರುವುದಿಲ್ಲ ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿ. ಜಗಳ ನಮ್ಮ ಮನೆಯ ಒಳಗೆ ಆಗಿರುತ್ತದೆ. ಜಗಳವಾದಾಗ ನಾನು, ಮುತ್ತಣ್ಣ ಮತ್ತು ವಿಜ್ಜಪ್ಪ ಇದ್ದೆವು. ನಮ್ಮ ಮನೆಯ ಮುಂದೆ ದಾರಿ ಇರುತ್ತದೆ. ಮುತ್ತಣ್ಣನಿಗೆ ತಿಪ್ಪಣ್ಣ ಹೊಡೆದಿರುತ್ತಾನೆ. ಕಾಲಿನಿಂದ ಎಡ ಮೊಣಕಾಲಿಗೆ ಒದ್ದಿರುತ್ತಾನೆ. ಮೊಣಕಾಲಿಗೆ ರಕ್ತಗಾಯ ಆಗಿರುತ್ತದೆ. ವಿಜಯಕುಮಾರನಿಗೆ ವೆಂಕಟೆಶ ಕಟ್ಟಿಗೆಯಿಂದ ತಲೆಗೆ ಮತ್ತು ಬುಜಕ್ಕೆ ಹೊಡೆದಿರುತ್ತಾನೆ. ಆಗ ರಕ್ತಗಾಯವಾಗಿರುತ್ತದೆ. ರಕ್ತ ಬಟ್ಟೆಯ ಮೇಲೆ ಬಿದ್ದಿತ್ತು. ರಕ್ತಸಿಕ್ತ ಬಟ್ಟೆಗಳನ್ನು ಪೋಲಿಸರಿಗೆ ಕೊಟ್ಟಿರುವುದಿಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ನಮಗೂ ಮತ್ತು ಆರೋಪಿತರ ನಡುವ ಯಾವುದೇ ಜಗಳ ನಡೆದಿಲ್ಲ ಎಂದರೆ ಸರಿಯಲ್ಲ. ಯಾವುದೇ ಗಾಯವಾಗಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನಮಗೆ ಯಾವುದೇ ಅವಾಚ್ಯವಾಗಿ ಬೈದಿಲ್ಲ ಜೀವ ಬೆದರಿಕೆ ಹಾಕಿಲ್ಲ ಎಂದರೆ ಸರಿಯಲ್ಲ. ನಾನು ಚಾ.ಸಾ-7 ರವರ ಮೂಲಕ ದೂರು ಕಳುಹಿಸಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ

ಸರಿಯಲ್ಲ.  ಆರೋಪಿತರ ಮತ್ತು ನಮ್ಮ ನಡುವೆ ಹೊಲದ ವೈಷಮ್ಯ ಇರುವದರಿಂದ ಅವರ ವಿರುದ್ದ ಸುಳ್ಳು ಕೇಸು ಹಾಕಿರುತ್ತೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ..
ಲಿಂಗಸಗೂರು.